Sri S. RAJAGOPAL.—Will the Goverement suggest to the Mysore University to permit the starting of evening colleges?

Sri S. R. KANTHI.—This question of opening evening colleges came up in the year 1963. For the first time Government wrote to the Mysore University on 25th June 1963 suggesting that this question might be considered favourably and it has been pending before the Academic Council, the Senate and the Syndicate. I hope this question will be settled soon.

ಶ್ರೀ ಸಿ. ಎಸ್. ಹುಲ್ಕೋಟಿ.—ಎಜುಕೇಷನ್ ಸೊಸೈಟಿಯವರು ಸಂಜೆ ಕಾಲೇಜುಗಳನ್ನು ತೆರೆಯಲು ಪ್ರಯತ್ನ ಮಾಡುತ್ತಾ ಇದ್ದಾರೆಯೇ?

ಶ್ರೀ ಎಸ್. ಆರ್. ಕಂಠಿ.—ಹೋದ ವರ್ಷ ಪ್ರಯತ್ನ ಮಾಡಿದರೂ ಯೂನಿವರ್ಸಿಟಿಯವರು ಈವನಿಂಗ್ ಕ್ಲಾಸಿಗೆ ಪರ್ಮಿಷನ್ ಕೊಡುವುದಕ್ಕಾಗುವುದಿಲ್ಲವೆಂದರು. ಆದ್ದರಿಂದ ಡೇ ಕಾಲೇಜಸ್ ಪ್ರಾರಂಭ ಮಾಡಿಕೊಂಡಿದ್ದಾರೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈವನಿಂಗ್ ಕಾಲೇಜುಗಳಿಂದ ಎಷ್ಟು ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆಂದು ಹೇಳುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಅದಕ್ಕೆ ಕೆಲವು ರೂಲ್ಸ್ ಇವೆ. ಯಾರು ನೌಕರಿ ಮಾಡುತ್ತಿದ್ದಾರೋ ಅವರಿಗೆ ಉಪಯುಕ್ತತೆಯಾಗಬೇಕು ಅದು.

ಶ್ರೀ ಸಿದ್ದಯ್ಯ ಕಾಶೀಮಠ್.—ಈವನಿಂಗ್ ಕಾಲೇಜುಗಳ ಅವಶ್ಯಕತೆ ಹೆಚ್ಚಿರುವುದರಿಂದ, ಆದಷ್ಟು ಮಟ್ಟಿಗೆ ತೀವ್ರಗತಿಯಲ್ಲಿ ಅವುಗಳನ್ನು ತೆರೆಯುವುದಕ್ಕೆ ಪ್ರಯತ್ನ ಮಾಡುತ್ತೀರ?

ಶ್ರೀ ಎಸ್. ಆರ್. ಕಂಠಿ.—ಪ್ರಾರಂಭ ಮಾಡುವವರು ಯೂನಿವರ್ಸಿಟಿಯವರು. ಅದರ ಬಗ್ಗೆ ಅವರು ಈಗಾಗಲೇ ನಿರ್ಣಯ ಮಾಡುತ್ತಾರೆಂಬ ವಿಶ್ವಾಸ ನನಗಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ನೌಕರಿಯಲ್ಲಿರುವವರಿಗೆ ಮಾತ್ರ ಈವನಿಂಗ್ ಕಾಲೇಜುಗಳ ಎಂದು ಅಪ್ಪಣೆ ಕೊಡಿಸಿದಿರಿ. ಅದರಲ್ಲಿ ವಿದ್ಯಾಭ್ಯಾಸ ಮಾಡಬೇಕೆಂಬ ಆಸೆ ಇರುವ ವಯಸ್ಕರಿಗೆಲ್ಲಾ ಸೇರುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಎಸ್. ಆರ್ ಕಂಠಿ.—ಅದರಲ್ಲಿ ಅಸೆಂಬ್ಲಿ ಮೆಂಬರು ಸೇರುವುದಕ್ಕೆ ಆಗುವುದಿಲ್ಲ. ಏಕೆಂದರೆ ಅವರು ನೌಕರಿಯಲ್ಲಿ ಇರುವುದಿಲ್ಲ.

Mr. SPEAKER.—Why should it not be considered?

Sri S. R. KANTHI.—It had been considered by the University Grants Commission first. It went before the Central Advisory Council of Education. They thought that this should be restricted to only a certain category of people.

ಶ್ರೀ ಎಚ್. ಆರ್. ಕೇಶವಮೂರ್ತಿ.—ನೌಕರಿಯಲ್ಲಿದ್ದವರಿಗೆ ಮಾತ್ರ ಸಂಜೆ ಕಾಲೇಜುಗಳಲ್ಲಿ ಪ್ರವೇಶ ಉಂಟು ಎಂದು ಹೇಳುತ್ತೀರ. ವಿದ್ಯಾವಂತರಾದ ರೈತರು, ಮತ್ತಿತರರು ಅದಕ್ಕೆ ಸೇರುವುದಕ್ಕೆ ಅವಕಾಶವಿರಬೇಡವೇ?

Sri S. R. KANTHI.—It is of course a suggestion for action.

ಶ್ರೀ ಆರ್. ಮುನಿಸ್ವಾಮಯ್ಯ.—ತಾವು ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ನಿಗೆ ಸಲಹೆ ಕೊಡುವಹಾಗಿದ್ದರೆ ಪರವಾಗಿಲ್ಲ.

ಶ್ರೀ ಎಸ್. ಆರ್. ಕಂಠಿ.—ಯು. ಜಿ. ಸಿ. ಯಿಂದ ಇದು ಬಂದಿದೆ. ಅವರಿಗೆ ನಾವು ಏನು ಸಲಹೆ ಕೊಡುವುದು?

Minor Irrigation Works costing about fifty thousand rupees and above sanctioned in Hassan Division for the year 1964-65.

*Q.—655 Sri S. SIVAPPA (Shravanabelagola).—

Will the Government be pleased to state :—

(*a*) the number of Minor Irrigation Projects costing fifty thousand rupees and above, which have been sanctioned in Hassan Division for the year 1964-65 ;

(*b*) whether the Budget provision has been made for these Projects ;

(*c*) what is the progress of work on these Projects ?

A.—**Sri ALUR HANUMANTHAPPA** (Deputy Minister for Minor Irrigation).—

(*a*) Nil.

(*b*) and (*c*) Does not arise in view of reply to clause (*a*).

Sri S. SIVAPPA.—A similar question was put yesterday regarding Chennarayapatna Taluk. The Government answered that they were going to take up a number of minor irrgation projects wherever necessary. I want a categorical answer whether this answer is correct or yesterday's answer is correct ?

† **Sri ALUR HANUMANTHAPPA.**—Yesterday a question was put and answer was given. No fresh works have been sanctioned whether below or above Rs. 50,000 in Hassan Division so far. Government is seriously considering the question of sanctioning projects for 1964-65.

Sri S. SIVAPPA.—During the budget debate the Finance Minister assured this House that he would supply the Members with a list of projects costing 50 thousand and more, which are going to be sanctioned during 1964-65. May I know when this list would be given to us ?

Sri ALUR HANUMANTHAPPA.—The estimates are ready but we have not finalised the list. We have no sufficient funds sanctioned forfresh works during 1964-65. Government is seriously considering that in view of the scarcity conditions, the irrigation potential should be increased.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಉಪಮಂತ್ರಿಗಳು 50 ಸಹಸ್ರಕ್ಕೆ ಒಳಗೇ ಆಗಲಿ, ಮೇಲೆ ಆಗಲಿ ಹಾಸನ ಡಿವಿಜನ್ನಿನಲ್ಲಿ ಯಾವ ಕೆಲಸವನ್ನೂ ಸ್ಯಾಂಕ್ಷನ್ ಮಾಡಿಲ್ಲ ಎಂದು ಹೇಳಿದರು. ಪ್ರಾಯಶಃ ಹಾಸನ ಡಿವಿಜನ್ನಿನ ಇರಿಗೇಷನ್ ಆಫೀಸರುಗಳಿಗೆ ಯಾವ ಕೆಲಸವನ್ನೂ ಮಾಡಬೇಡಿ ಎಂದು ಡೈರೆಕ್ಷನ್ ಕೊಟ್ಟಿದ್ದೀರೇನೋ !

ಶ್ರೀ ಆಲೂರು ಹನುಮಂತಪ್ಪ.—ಹಾಸನ ಡಿವಿಜನ್ ಮಾತ್ರವಲ್ಲ, ಯಾವ ಡಿವಿಜನ್ನಿನಲ್ಲಿಯೂ ಮಾಡಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಎಸ್ಟಿಮೇಟುಗಳನ್ನು ರೆಡಿ ಮಾಡಿಕೊಂಡು ಎಕ್ಸಿಕ್ಯೂಟೀವ್ ಇಂಜನಿಯರುಗಳು ಇಟ್ಟುಕೊಂಡಿದ್ದರೂ, ಯಾವ ಮೈನರ್ ವರ್ಕ್ಸ್‌ನ್ನೂ ತೆಗೆದುಕೊಳ್ಳ ಕೂಡದೆಂದು ಸರ್‌ಕ್ಯುಲರ್ ಕಳುಹಿಸಿರುವುದರಿಂದ, ಕೈಕಟ್ಟಿಕೊಂಡು ಕುಳಿತು, ಯಾವ ಕೆಲಸವನ್ನೂ ತೆಗೆದುಕೊಳ್ಳದೆ ನಿಲ್ಲಿಸಿರುವುದು ನಿಜವೇ ?

ಶ್ರೀ ಆಲೂರು ಹನುಮಂತಪ್ಪ.—ಅವರು ತೆಗೆದುಕೊಳ್ಳುವ ಮಾತಲ್ಲ. ಸರಕಾರ ಸ್ಯಾಂಕ್ಷನ್ ಮಾಡಿ, ಯಾವ ವರ್‌ಕ್ಸ್ ತೆಗೆದುಕೊಳ್ಳಬೇಕೆಂದು ತಿಳಿಸಿದರೆ ಅವರು ತೆಗೆದುಕೊಳ್ಳುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ಹೋದ ಸಲ ಈ ಪ್ರಶ್ನೆ ಬಂದಾಗ "I am considering it seriously, ಈ ವರ್ಷ ನೋಡಿಕೊಳ್ಳುತ್ತೇವೆ ಎಂದು ಹೇಳಿದ್ದರು. Is there any master-plan so far as Hassan Division is concerned ?

ಶ್ರೀ ಆಲೂರು ಹನುಮಂತಪ್ಪ.—ಹೋದ ವರ್ಷ ನಾಲ್ಕು ಕೋಟಿಗೆ ಮೇಲ್ಪಟ್ಟು ಎಸ್ಟಿಮೇಟ್ ಸ್ಯಾಂಕ್ಷನ್ ಮಾಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—1962-63 ಹಾಗೂ 1963-64ನೆ ಇಸವಿ ಬಡ್ಜೆಟ್ಟಿನಲ್ಲಿ ಇನ್‌ಕ್ಲೂಡ್ ಆಗಿರತಕ್ಕಂಥ ಕೆಲಸಗಳನ್ನೂ, ಎಸ್ಟಿಮೇಟುಗಳನ್ನೂ ಚೀಫ್ ಇಂಜನಿಯರು ಪೆಂಡಿಂಗ್ ಇಟ್ಟಿದ್ದಾರೆ. ಅವುಗಳನ್ನು ಏತಕ್ಕೆ ಸ್ಯಾಂಕ್ಷನ್ ಮಾಡಿಲ್ಲ ? ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏಕೆ ಕ್ರಮ ತೆಗೆದುಕೊಂಡಿಲ್ಲ ?

ಶ್ರೀ ಆಲೂರು ಹನುಮಂತಪ್ಪ.—ಬಜೆಟ್ ವರ್ಕ್‌ಸಿನಲ್ಲಿ ಮುಂಜೂರಾಗಿರುತ್ತವೆ. ಆದರೆ ಅವುಗಳಲ್ಲಿ ಕೆಲವು ಟೆಕ್ನಿಕಲ್ ಡಿಫಿಕಲ್ಟೀಸ್‌ನಿಂದಾಗಿ ಹಾಗೆಯೇ ನಿಂತಿರಬಹುದು, ಈ ವರ್ಷದಲ್ಲಿ ಲಿಫ್ಟ್ ರೆಡಿ ಆಗುವಾಗ, ಸರ್ಕಾರ ತೀವ್ರವಾಗಿ ಯೋಚನೆ ಮಾಡಿ, ಅವುಗಳನ್ನು ಸ್ಯಾಂಕ್ಷನ್ ಮಾಡ ಬಹುದೇ, ಬಿಡಬಹುದೇ ಅನ್ನುವುದನ್ನು ನಿರ್ಧರಿಸುತ್ತದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಹಾಸನ ಡಿಸ್ಟ್ರಿಕ್ಟ್ ಜಿಲ್ಲಾ ಮುಖಂಡರುಗಳ ಒಂದು ಸಭೆಯಲ್ಲಿ ಮಾನ್ಯ ನಿಜಲಿಂಗಪ್ಪನವರು ಹಾಸನ ಜಿಲ್ಲೆಯ ಎಲ್ಲಾ ಆರು ತಾಲೂಕಿನ ಕೆರೆಗಳನ್ನೂ ಅಗತ್ಯವಾಗಿ ರಿಪೇರಿ ಮಾಡಿಸಿಕೊಡುತ್ತೇನೆಂದು ಭರವಸೆ ಕೊಟ್ಟಿದ್ದರೋ ಇಲ್ಲವೋ ?

ಶ್ರೀ ಎಸ್. ನಿಜಲಿಂಗಪ್ಪ.—ಹೌದು ಭರವಸೆ ಕೊಟ್ಟಿದ್ದೇನೆ, ಕೊಡುತ್ತಲೂ ಇದ್ದೇನೆ.

ಶ್ರೀ ಕೆ. ಲಕ್ಕಪ್ಪ.—ಮತ್ತೆ ಭರವಸೆ ಕೊಡುವುದರಿಂದ ಏನು ಪ್ರಯೋಜನ ?

ಶ್ರೀ ಎಸ್. ನಿಜಲಿಂಗಪ್ಪ.—ಈ ತರಹ ಕುಳಿತುಕೊಂಡು ಸುಮ್ಮನೆ ಟೀಕೆ ಮಾಡುವುದರಿಂದ ಪ್ರಯೋಜನವಿಲ್ಲ.

Mr. SPEAKER.—This kind of a running commentary is reprehensible The commenting habit should not be cultivated. I want the Hon'ble Member Sri K. Lakkappa to take note of it.

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಬಂದು ಇಂಥಿಂಥಾದ್ದು ಹೀಗಾಗಬೇಕು ಎಂದು ಅನೇಕ ಸಲ ಸಲಹೆ ಕೊಟ್ಟಿದ್ದಾರೆ; ಅದರಲ್ಲಿ ಆದಷ್ಟು ಮಟ್ಟಿಗೆ ತಗೆದುಕೊಂಡು, ಅನೇಕ ಕೆಲಸಗಳು ನಡೆಯುತ್ತಾ ಇವೆ. ಟೀಕೆಗೋಸ್ಕರ ಕೇಳುವುದಾದರೆ ಅಭ್ಯಂತರವಿಲ್ಲ, ಕೇಳಲಿ.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ಈ ಸಭೆಯಲ್ಲಿ ಅನೇಕಸಲ ಮಾನ್ಯ ಉಪಮಂತ್ರಿಗಳೂ ಮತ್ತು ಮುಖ್ಯಮಂತ್ರಿಗಳೂ, ಈ ಅಭಾವಪರಿಸ್ಥಿತಿ ಇರತಕ್ಕಂಥ ಪ್ರದೇಶಗಳಲ್ಲಿ ಎಲ್ಲಾ ಕೆಲಸಗಳನ್ನೂ ಅತಿ ಜರೂರಾಗಿ ಮಾಡುತ್ತೇವೆಂದು ಅನೇಕಸಲ ಭರವಸೆ ಕೊಟ್ಟಿದ್ದಾರೆ. ಆದರೂ ತುಮಕೂರು ಡಿಸ್ಟ್ರಿಕ್ಟ್‌ನಲ್ಲಿ, ಕೋಲಾರ ಡಿಸ್ಟ್ರಿಕ್ಟಿನಲ್ಲಿ ಮತ್ತು ಅನೇಕ ಡಿಸ್ಟ್ರಿಕ್ಟುಗಳಲ್ಲಿ 5 ಪರ್ಸೆಂಟ್ ಮೇಲೆ irrigation facilities ಒದಗಿಸಿಲ್ಲ. ಆದರೂ ಕಂದಾಯಜಾಸ್ತಿಮಾಡಿದ್ದಾರೆ, ಕೊಟ್ಟಿರತಕ್ಕ ಭರವಸೆಯನ್ನು ನೆರವೇರಿಸದಿರುವುದರಿಂದ ಜನಗಳ ಸ್ಥಿತಿ ಯಾವರೀತಿಯಾಗಿದೆ ಎಂದು ಹೇಳುತ್ತಿದ್ದೇನೆ. ಅದಕ್ಕೋಸ್ಕರ ಈ ಸಭೆಯಲ್ಲಿ ತಮ್ಮ ಮೂಲಕ ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದೇನೆಯೇ ಹೊರತು, ಟೀಕೆ ಗೋಸ್ಕರ ಯಾವುದನ್ನೂ ಮಾಡುತ್ತಿಲ್ಲ ಜನಗಳಿಗೋಸ್ಕರ ಈ ಪ್ರಶ್ನೆಗಳನ್ನು ಕೇಳುತ್ತಾ ಇದ್ದೇವೆ.

Mr. SPEAKER.—Is it a supplementary or a personal statement ?

ಶ್ರೀ ಕೆ. ಲಕ್ಕಪ್ಪ.—Personal statement ಅಲ್ಲ. ಮಾನ್ಯ ಮುಖ್ಯಮಂತ್ರಿಗಳು ಲಘುವಾಗಿ ಟೀಕೆ ಮಾಡುತ್ತಿದ್ದೇನೆಂದು ಹೇಳಿದರು. ಈ ಸಭೆಯ ಗೌರವಕ್ಕೆ ಧಕ್ಕೆಬರುವ ರೀತಿಯಲ್ಲಿ ಯಾವರೀತಿಯಲ್ಲಿಯೂ ಮಾಡುತ್ತಾ ಇಲ್ಲ. ಈ ಸಭೆಯಲ್ಲಿ ಮೂರುವರ್ಷಗಳಿಂದಲೂ ಭರವಸೆಕೊಟ್ಟ ಎಲ್ಲಾ ನೀರಾವರಿ ಕೆಲಸಗಳನ್ನೂ, ಅತಿ ಜಾಗ್ರತೆಯಾಗಿ ಪಿ.ಡಬ್ಲು.ಡಿ. ಯಿಂದ ಮಾಡಿಸುತ್ತೇವೆಂದು ಭರವಸೆ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಭರವಸೆ ಕೊಟ್ಟಿದ್ದರಿಂದಲೇ ಅನೇಕ ಕಡೆಗಳಿಂದ ಹಣ ತಂದು ನಾಲ್ಕು ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಮೈಸೂರಿನ ಚರಿತ್ರೆಯಲ್ಲಿ ಎಂದೆಂದೂ ಇಷ್ಟು ಖರ್ಚಾಗಿಲ್ಲ. ಇದು ಬಹಳ ಕಷ್ಟವಾದ ಪ್ರಶ್ನೆ; ಸಾವಿರಾರು ವರ್ಷಗಳಿಂದ ನಿರ್ಲಕ್ಷವಾಗಿರುವ ಪ್ರಶ್ನೆ. ಇನ್ನು ಒಂದೆರಡು ವರ್ಷಗಳಲ್ಲಿ ಅತ್ಯಂತ ಪ್ರಯತ್ನ ಮಾಡಿ, ಎಲ್ಲವನ್ನೂ ಸ್ಯಾಂಕ್ಷನ್ ಮಾಡಿದರೂ, ಮಾಡುವುದಕ್ಕೆ ಸಾಧ್ಯವಿಲ್ಲ. ಐದು ಪರ್ಸೆಂಟ್ ನೀರಾವರಿ ಇದೆ ಎನ್ನುವುದು ಸರ್ಕಾರದ ಗಮನದಲ್ಲಿದೆ. ನೀರಾವರಿ ಸೌಲಭ್ಯ ಬೇಕು ಎಂದೇ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದೆ, ಅದನ್ನೂ ತೀವ್ರತೆಯಿಂದ ಮಾಡಿದೆ. ಬಡತನ ಇದೆಯೆಂಬುದೂ ಗೊತ್ತಿದೆ; ಅದನ್ನು ನಿವಾರಣೆ ಮಾಡ ಬೇಕು ಅನ್ನುವುದೇ ಉದ್ದೇಶ. ಮಂತ್ರ ಮಾಡಿದರೆ ಕೆಲಸ ಆಗುವುದಿಲ್ಲ. ಇದು ಒಂದೆರಡು ವರ್ಷ ದೊಳಗೆ 4-5 ವರ್ಷದೊಳಗೆ ಆಗತಕ್ಕಂಥ ಪ್ರಶ್ನೆಯಲ್ಲ, 10-15 ವರ್ಷದೊಳಗೆ ಸಂಪೂರ್ಣವಾಗಿ ಬಗೆಹರಿಸತಕ್ಕಂಥ ಪ್ರಶ್ನೆ. ಇದನ್ನು ಒಂದೆರಡು ವರ್ಷಗಳಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲವೆನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ.

ಶ್ರೀ ಎಸ್. ಶಿವಪ್ಪ.—ಈ ಪ್ರಶ್ನೆ ನಿರ್ದಿಷ್ಟವಾಗಿರುವುದರಿಂದ ಈಗಲಾದರೂ ಹಾಸನ ಜಿಲ್ಲೆಗೆ ಸಂಬಂಧಪಟ್ಟಂತೆ ತಮ್ಮ ಹತ್ತಿರ ಎಷ್ಟು ಎಸ್ಟಿಮೇಟುಗಳು ಇವೆಯೋ ಅದರ ಹೆತ್ತಿಕೆ ಎಷ್ಟು ಕಾರ್ಯ ಗಳನ್ನು ತಾವು ಶೀಘ್ರವಾಗಿ ಮುಂಜೂರು ಮಾಡುತ್ತೀರಿ ಎಂಬ ಭರವಸೆಯನ್ನು ದಯಮಾಡಿ ಕೊಡು ತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಮತ್ತೊಂದು ಪ್ರಶ್ನೆಯನ್ನು ಹಾಕಿದರೆ ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—1962-63, 1963-64ನೇ ಸಾಲಿನ ಬಡ್ಜೆಟ್‌ನಲ್ಲಿ ಸೇರಿ ನಲ್ಪಟ್ಟಿದ್ದು ಎಸ್ಟಿಮೇಟ್ ಆಗಿ ಅದು ರೆಮ್ಯುನರೇಟೀವ್ ಆಗಿದ್ದು ಮುಂಜೂರು ಮಾಡುವುದಕ್ಕೆ ಏನು ಬೇಕೋ ಅದೆಲ್ಲವೂ ಇದ್ದರೂ ಮುಂಜೂರು ಮಾಡಿಲ್ಲ. ಈಗಲಾದರೂ ಸ್ಕೇರ್ಸಿಟಿ ಏರಿಯಾದಲ್ಲಿ ಮುಂಜೂರು ಮಾಡಿ ಆ ಕೆಲಸಗಳನ್ನು ಕಾರ್ಯಗತ ಮಾಡಿಕೊಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಯಾವುದಾದರೂ ಒಂದೆರೆಡು ನಿಂತಿದ್ದರೆ ಅದಕ್ಕೆ ಕಾರಣ ಗೊತ್ತಿಲ್ಲ. ನಿರ್ದಿಷ್ಟವಾಗಿ ಹೇಳಿದರೆ ವಿಚಾರ ಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಚೀಫ್ ಇಂಜನಿಯರ ಆಫೀಸಿನಲ್ಲಿ ಆ ವಿವರಗಳು ಇವೆ. ಅವನ್ನು ತರಿಸಿ ನೋಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಆಗಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಣ್ಣ ನೀರಾವರಿ ಕಾಮಗಾರಿಗಳಿಗೆ ಮಾಸ್ಟರ್ ಪ್ಲಾನ್ ತಯಾರಾಗುತ್ತಾ ಇರುವುದರಿಂದ 15-20 ವರ್ಷಗಳ ನಿರ್ಧರವಾದ ಕಾರ್ಯಕ್ರಮವನ್ನು ಗೊತ್ತು ಮಾಡಿ ಆ ಮೂಲಕ ಇವುಗಳನ್ನೆಲ್ಲಾ ಗೊತ್ತು ಮಾಡುವುದು ಸೂಕ್ತವಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಆ ರೀತಿ ಮಾಡಬೇಕೆಂಬ ಉದ್ದೇಶದಿಂದಲೇ ಅದನ್ನು ತಯಾರು ಮಾಡರಾಗುತ್ತಿದೆ, ಅದನ್ನು ಅದಷ್ಟು ಜಾಗ್ರತೆ ಕಾರ್ಯರೂಪಕ್ಕೆ ತಂದು ರಾಜ್ಯದಲ್ಲಿರತಕ್ಕ ಅಭಾವ ಪ್ರದೇಶಗಳಿಗೆ ಅನುಕೂಲ ಮಾಡಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಬೃಹತ್ ಯೋಜನೆಗಳಿಗಿಂತಲೂ ಸಣ್ಣ ನೀರಾವರಿ ಯೋಜನೆಗಳಿಗೆ ಶೀಘ್ರವಾಗಿ ಗಮನ ಕೊಟ್ಟು ಪೂರೈಸಬೇಕೆಂಬ ಆಶೆ ನಮಗೆ ಇದೆ ಅದನ್ನು ಈಡೇರಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದೇ ಸರ್ಕಾರದ ಉದ್ದೇಶ.

ಶ್ರೀ ಕೆ. ಲಕ್ಕಪ್ಪ.—ಹಿಂದೆ ಕೆಲವು ಸಣ್ಣ ನೀರಾವರಿ ಯೋಜನೆಗಳಿಗೆ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಟ್ಟಾಗ ಅತಿ ಜಾಗ್ರತೆಯಾಗಿ ಆ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಹೇಳಿದ್ದಾರೆ, ಅದೇ ರೀತಿ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಟ್ಟಿರತಕ್ಕ ಮತ್ತು ಕೊಡುತ್ತೇವೆ ಎಂದು ಮುಂದೆ ಬರತಕ್ಕ ಜನರಿಗೆ ಆ ಕೆಲಸಗಳನ್ನು ಷುರು ಮಾಡಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಇವತ್ತು ಕೊಟ್ಟರೆ ನಾಳೆಯೇ ಷುರು ಮಾಡಿಸುತ್ತೇವೆ.

Scheme for the supply of water to Gajendragadha, Holealur and Naregallu villages in Ron Taluk.

*Q.—669. Sri A. J. DODDAMETI (Ron).—

Will the Government be pleased to state :—

(*a*) whether it is a fact that the scheme for the supply of water to Gajendragadha, Holealur and Naregallu villages in Ron Taluk, Dharwar District, is being prepared ;

(*b*) if so, the estimated cost in respect of each village ;

(*c*) the stage at which the said schemes stand at present ;

(*d*) the time required to prepare the above schemes completely ?

A.—Sri RAMAKRISHNA HEGDE (Minister for Development, Panchayat Raj and Co-operation).—

(*a*) Sl. Nos. 1 and 3 are still to be investigated ; Sl. No. 2 (Hole Alur) is under investigation.

(*b*) For the villages (1) and (3) this does not arise. For village No. 2, rough estimated cost is Rs. 1,50,000.

(*c*) *Vide* (*a*) above.

(*d*) About 3 months.